ಬ್ರಹ್ಮಸ್ತುತಿ

ಏನು ಬರೆದೆಯೊ ಬ್ರಹ್ಮ (ದೇವರ ನಾಮ) **ರಾಗ:ಬಾಗೇಶ್ರೀ, ಆದಿತಾಳ**

ಏನು ಬರೆದೆಯೊ ಬ್ರಹ್ಮ ನೀನೆಷ್ಟು ನಿರ್ದಯನೊ। ಅಭಿಮಾನವನು ತೊರೆದು ಪರರನ್ನು ಬೇಡುವುದ॥ಪ॥ ಗೇಣೊಡಲು ಪೊರೆವುದಕೆ ಪೋಗಿ ಪರರನು। ಪಂಚ ಬಾಣಸಮ ರೂಪ ನೀನೆಂದು ಪೊಗಳೆ॥ ಆಣೆ ನಿನ್ನಾಣೆಲ್ಲ ನಾಳೆ ಬಾರೆಂದೆನಲು। ಗಾಣ ತಿರುಗುವ ಎತ್ತಿನಂತೆ ಬಳಲುವುದ॥1॥ ಬಲ್ಲಿದರ ಮನೆಯ ಬಾಗಿಲ ಕಾಯ್ದು ಬೇಸತ್ತು। ಸೊಲ್ಲು ಸೊಲ್ಲಿಗೆ ಅವರ ಕೊಂಡಾಡುತ। ಇಲ್ಲ ಈ ವೇಳೆಯಲಿ ತಿರುಗಿ ಬಾರೆಂದೆನಲು। ಅಲ್ಲವನು ತಿಂದ ಇಲಿಯಂತೆ ಕೊರಗುವುದ॥2॥ ಹಿಂದೆ ಬರೆದ ಬರಹ ಹೇಗಾದರಾಗಲಿ। ಮುಂದೆನ್ನ ವಂಶದಲಿ ಜನಿಸುವರ ಕಾಯೊ। ಸಂದೇಹಿಸಲಿಬೇಡ ಪುರಂದರವಿಠ್ಠಲ। ಕಂದರ್ಪ ಜನಕ ಉಡುಪಿಯ ಕೃಷ್ಣನಾಣೆ॥3॥

ಬ್ರಹ್ಮ ನಿಂಗೆ ಜೋಡಿಸ್ತೀನಿ (ರತ್ನನಪದ) **ರಾಗ: ಜಾನಪದ ಮಟ್ಟು**

ಬ್ರಹ್ಮನಿಂಗೆ ಜೋಡಿಸ್ತೀನಿ ಯೆಂಡ ಮುಟ್ಟಿದ ಕೈನ। ಭೂಮಿ ಉದ್ದುಕ ಬೊಗ್ಗಿಸ್‌ತೀನಿ ಯೆಂಡತುಂಬ್ಕೊಂಡ್ ಮೈನ॥ ಬುರ್ ಬುರ್ ನೊರೆ ಬಸಿಯೋವಂತ ಒಳ್ಳೆ ವುಳಿ ಎಂಡ। ಕೊಡ್ತಿನ್ ನಂದು ಪ್ರಾರ್ತ್ನೇಕೇಳು ಸರಸೋತಮ್ಮನ್ ಗಂಡ॥ ಸರಸೋತಮ್ಮ ಮುನ್ಸ್ಕಂಡ್ ಅವ್ಳೆ ನೀನಾರ್ ಒಸ್ಸಿ ಯೋಳು। ಕುಡುದ್ಬುಟ್ ಆಡ್ದ್ರೆ ತೊದಲ್ತಾದಣ್ಣ ನಾಲ್ಗೆ ಬಾಳ ಗೋಳು॥ ಅಕ್ಬಾನೆಲ್ಲಾ ಸರಸೋತಮ್ಮ ಪಟ್ಟಾಗ್ ಇಡಕೊಂಬುಟ್ಟೆ। ಮುನಿಯ ಯೆಂಡ ಬುಡೋವಂಗೇನೆ ಬುಡತಾಳ್ ಔಳ್ ಕೈಗಟ್ಟೆ॥ ಮುನಿಯಂಗಾರ ಕಾಸ್ ಓಗ್ತೈತೆ ಯೆಚ್ಗೆ ಯೆಂಡ ಬುಟ್ರೇ ಸರಸೋತಮ್ಮಂಗ್ ಏನೋಗ್ತೈತೆ ಮಾತ್‌ಸಲೀಸಾಗ್ ಕೊಟ್ರೆ॥ ನಂಗೆ ನೀನು ಲಾಯ್ರಿಯಾಗಿ ನನ್ ಕೇಸ್ ಗೆದ್ ಗಿದ್ ಕೊಟ್ರೆ। ಮಾಡ್ತೀನಣ್ಣ ನಿನ್ ವೊಟ್ಟೇನ ವುಳೀ ಎಂಡಕ್ ಪೊಟ್ರೆ॥ ಕಮಲದ್ ಊವಿನ್ ಕುರ್ಚಿ ಮ್ಯಾಗೆ ಜೋಕಾಗ್ ಕುಂತ್ಕೊ ನೀನು। ನಾಕೂ ಬಾಯ್ಗೂ ನಾಕು ಬುಂಡೆ ಯೆಂಡ ತತ್ತೀನ್ ನಾನು॥ ಸರಸೋತಮ್ಮಂಗ್ ಯೋಳಾಕಿಲ್ಲ ನೀನೇನ್ ಎದರ್ಕೋಬೇಡ। ಕೇಳಿದ್ ವರಾನ್ ವೊಂದೀಸ್ಕೊಟ್ರೆ ತಕ್ಕೋ ಯೆಂಡದ್ ಪೇಡ॥

ಪಾದಸ್ಮರಣೆಸ್ತುತಿ

ದೇವರನಾಮ

ಇಕೋ ನೋಡೆ ರಂಗನಾಥನ **ರಾಗ: ಶಂಕರಾಭರಣ**

ಇಕೋ ನೋಡೆ ರಂಗನಾಥನ ಪುಟ್ಟ ಪಾದವಾ। ಸಿಕ್ಕಿತೆ ಶ್ರೀ ಲಕ್ಷ್ಮೀಪತಿಯ ದಿವ್ಯ ಪಾದವಾ॥ಪ॥ ಶಂಖುಚಕ್ರ ಗದಾ ಪದ್ಮ ಅಂಕಿತ ಪಾದವಾ। ಅಂಕುಶ ಕುಲಿಶ ಧ್ವಜಾರೇಖಾ ಅಂಕಿತ ಪಾದವಾ। ಪಂಕಜಾಸನನ ಹೃದಯದಲ್ಲಿ ನಲಿವ ಪಾದವಾ। ಸಂಕಟ ಹರಣ ವೆಂಕಟೇಶನ ದಿವ್ಯಪಾದವಾ॥1॥ ಲಲನೆ ಲಕ್ಷ್ಮೀ ಅಂಕದಲ್ಲಿ ನಲಿವ ಪಾದವಾ। ಜಲಜಾಸನನಭೀಷ್ಟವೆಲ್ಲ ಪಡೆದ ಪಾದವಾ। ಮಲ್ಲರ ಗೆಲಿದು ಕಂಸಾಸುರನ ಕೊಂದ ಪಾದವಾ। ಬಲಿಯ ಮೆಟ್ಟಿದ ಭಾಗೀರಥಿಯ ಪಡೆದ ಪಾದವಾ॥2॥ ಬಂಡೆಯ ಬಾಲೆಯ ಮಾಡಿದ ಉದ್ದಂಡ ಪಾದವಾ। ಬಂಡಿಲಿದ್ದ ಶಕಟಾಸುರನ ಒದ್ದ ಪಾದವಾ। ಅಂಡಜ ಹನುಮರ ಭುಜದೊಳೊಪ್ಪುವ ದಿವ್ಯ ಪಾದವಾ। ಕಂಡೆವೆ ರಂಗ ವಿಠಲನ ದಿವ್ಯ ಪಾದವಾ॥3॥

ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ **ರಾಗ: ಪೂರ್ವಿಕಲ್ಯಾಣಿ, ಆದಿತಾಳ**

ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ ಫುಲ್ಲನಾಭ ನೀನಿದ್ದಲ್ಲಿ ಸೇರಿಸೆನ್ನ॥ಪ॥ ಮರಣವನೊಲ್ಲೆ ಜನನವನೊಲ್ಲೆ ದುರಿತ

ಸಂಸಾರ ಕೋಟಲೆಯ ನಾನೊಲ್ಲೆ। ಕರುಣದಿ ಕರುಗಳ ಕಾಯ್ದ ಗೋವಳ ನಿನ್ನ ಚರಣ ಕಮಲದ ಸ್ಮರಣೆಯೊಳಿರಿಸೆನ್ನ॥1॥ ಬೆಂದೆ ಸಂಸಾರವೆಂಬೊ ಬೇನೆ ಮಧ್ಯದಲ್ಲಿ ನೊಂದೆನೊ ನಾ ಬಹಳ ಕರೆಕರೆಯಲ್ಲಿ। ನಂದಗೋಪನ ಕಂದ ವೃಂದಾವನ ಪ್ರಿಯ ಎಂದೆಂದೂ ನಿನ್ನ ಸ್ಮರಣೆಯೊಳಿರಿಸೆನ್ನ॥2॥ ಪುತ್ರ ಮಿತ್ರ ಕಳತ್ರ ಬಂಧುಗಳೆಂಬ ಕತ್ತಲೆಯೊಳು ಸಿಲುಕಿ ಕಡುನೊಂದೆನಲ್ಲ। ಮುಕ್ತಿದಾಯಕ ಉಡುಪಿಯ ಕೃಷ್ಣರಾಯ ಭಕ್ತವತ್ಸಲ ಶ್ರೀ ಪುರಂದರ ವಿಠಲ॥3॥

ಎಚ್ಚರಿಕೆ4 ನಿಶ್ಚಿತ ಚಿಂತೆಯಲಿ **ರಾಗ: ಮೋಹನ, ಛಾಪುತಾಳ**

ಎಚ್ಚರಿಕೆ ಎಚ್ಚರಿಕೆ ಎಚ್ಚರಿಕೆ, ಎಚ್ಚರಿಕೆ॥ಪ॥ ನಿಶ್ಚಿತ ಚಿಂತೆಯಲಿ ಹರಿಯ ಧ್ಯಾನವ ಮಾಡುವುದಕ್ಕೆ॥ಅ.ಪ॥ ಅಜನು ತೊಳೆದು ಅರ್ಚಿಸುವ ಶ್ರೀ ಪಾದಕ್ಕೆ ಎಚ್ಚರಿಕೆ। ಧ್ವಜ ವಜ್ರರೇಖೆ। ಇಂದ ಒಪ್ಪುವ ಪಾದಕ್ಕೆ ಎಚ್ಚರಿಕೆ। ವ್ರಜದ ಗೋಪಿಯರು ಭಜಿಸುವ ಪಾದಕ್ಕೆ ಎಚ್ಚರಿಕೆ। ಸುಜನರೆಲ್ಲರೂ ಬಂದು ಎರಗುವ ಪಾದಕ್ಕೆ ಎಚ್ಚರಿಕೆ॥1॥ ಸುರರೆಲ್ಲರೂ ಬಂದು ಎರಗುವ ಪಾದಕ್ಕೆ ಎಚ್ಚರಿಕೆ। ಸರಿಸಿಜಾಕ್ಷಿ ಸವಿದೊತ್ತುವ ಪಾದಕ್ಕೆ ಎಚ್ಚರಿಕೆ। ಗರುಡನೇರಿ ಮೆರೆವ ಗಾಂಭೀರ್ಯಪಾದಕ್ಕೆ ಎಚ್ಚರಿಕೆ। ಉರಗನ ಮೇಲೆ ಓಡ್ಯಾಡಿದ ಪಾದಕ್ಕೆ ಎಚ್ಚರಿಕೆ॥2॥ ಲಲನೆಯರ ಸ್ತನದಲ್ಲಿ ಕುಣಿದಂತ ಪಾದಕ್ಕೆ ಎಚ್ಚರಿಕೆ। ಜಲಜಾಸನ ಬಂದು ವಂದಿಪ ಪಾದಕ್ಕೆ ಎಚ್ಚರಿಕೆ। ಶಿಲೆಯಾಸ್ತ್ರೀಯಳ ಮಾಡಿದ ಶೃಂಗಾರ ಪಾದಕ್ಕೆ ಎಚ್ಚರಿಕೆ। ಚೆಲುವ ಹಯವದನನ। ಚರಣಾರವಿಂದಕ್ಕೆ ಎಚ್ಚರಿಕೆ॥3॥

ಎಂಥಾ ಪಾವನ ಪಾದವೊ **ರಾಗ: ಅಠಾಣ, ಆದಿತಾಳ**

ಎಂಥಾ ಪಾವನ ಪಾದವೊ ಕೃಷ್ಣಯ್ಯ ಇನ್ನೆಂಥಾ ಚೆಲುವ ಪಾದವೋ॥ಪ॥ ಎಂಥಾ ಪಾವನ ಪಾದ ಇಂತು ಜಗದಿ ಕೇಳು। ಪಂಥದೊಳಿದ್ದ ಕುರುಪತಿಯ ಉರುಳಿಸಿದ॥ಅ.ಪ.॥ ಹಲವು ಕಾಲಗಳಿಂದಲಿ ಮಾರ್ಗದಿ ಶಿಲೆ ಶಾಪ ಪಡೆದಿರಲು। ಒಲಿದು ರಜದಿ ಪಾವನಗೈದು ಕರುಣದಿಂದಬಲೆಯ ಮಾಡಿ ಸಲಹಿದ ಶ್ರೀಹರಿಯ॥1॥ ಬಲಿಯದಾನವ ಬೇಡಿ ತ್ರೈಲೋಕ್ಯವ ನಳೆದು ಏಕಾಂಘ್ರಿಯಲಿ .. .. ಬೆಳೆದು ಭೇದಿಸಲಾಗ ನಳಿನಜಾಂಡವ ಸೋಕಿ ಚೆಲುವ ಗಂಗೆಯ ಪೆತ್ತ ಜಲಜಾಸನಾರ್ಚಿತ ॥2॥ ಚೆಂಡು ತರುವ ನೆಪದಿ ಕಾಳಿಂಗನುದ್ದಂಡ ಮಡುವ ಧುಮುಕಿ। ಚಂಡ ಕಾಳಿಂಗನ ಮಂಡೆಯಲಿ ಪಾದ ಪುಂಡರೀಕವನಿಟ್ಟು ತಾಂಡವವಾಡಿದ॥3॥ ಸಂತತ ಸೌಖ್ಯವೀವ ಕಾವೇರಿಯ ಅಂತರಂಗದಿ ನೆಲೆಸಿ ।..... ಸಂತೋಷದಿಂದ ಅನಂತನ ಮೇಲೆ ನಿಶ್ಚಿಂತೆಯೊಳು ಲಕುಮಿ ಭೂಕಾಂತೆಯರ ಸೇವಿಪ॥4॥ ಒಲಿದು ಗಯಾಸುರನ ಶಿರದೊಳಿಟ್ಟು ಹಲವು ಭಕ್ತರ ಪೊರೆವ .... ನೆಲೆಸಿ ಉಡುಪಿಲಿ ಎನ್ನ ಹೃದಯಕಮಲದಲ್ಲಿ ತೊಲಗದೆ ಇರುತ್ತಿದ್ದ ಸುಲಭ ಹಯವದನನ॥5॥

ಎಂದಿಗಾದರೂ ನಿನ್ನ ಪಾದಾರವಿಂದವೆ **ರಾಗ: ಶುದ್ಧಧನ್ಯಾಸಿ**

ಎಂದಿಗಾದರೂ ನಿನ್ನ ಪಾದಾರವಿಂದವೆ ಗತಿಯೆಂದು ನಂಬಿದೆನೊ। ಬಂಧುಬಳಗವ ಬಿಟ್ಟು ಬಂದೆ ನಿನ್ನ ಮನೆಗಿಂದು। ಮಂದರಧರ ಗೋವಿಂದ ಪುರಂದರವಿಠಲನೆ ನೀ ಬಂಧು॥1॥ ಅನ್ಯರೊಬ್ಬರ ಕಾಣೆ ಮನ್ನಿಸುವರೆನ್ನ ಆಪನ್ನ ರಕ್ಷಕನೆ ಪರಿಪಾಲಿಸು। ಇನ್ನು ಪನ್ನಗಶಯನ ಶ್ರೀ ಪುರಂದರವಿಠಲನೇ ಬಂಧು॥2॥ ಬಾರಿಬಾರಿಗೆ ನಿನ್ನ ಚರಣಕ್ಕೆ ಶರಣೆಂಬೆ। ಭಾರತಿರಮಣನೇ ಬಾರೋ ಮನೆಗಿಂದು। ತಂದೆ ಶ್ರೀ ಪುರಂದರವಿಠಲರಾಯನೆ। ಎಂದೆಂದಿಗು ನೀನೇ ಜಗಕೆ ಬಂಧು॥3॥

ಎಂದೆಂದು ನಿನ್ನ ಪಾದವೆ **ರಾಗ: ಕಾಂಬೋಧಿ**

ಎಂದೆಂದು ನಿನ್ನ ಪಾದವೆ ಗತಿ ಎನಗೆ ಗೋವಿಂದ। ಬಾರಯ್ಯ ಎನ್ನ ಹೃದಯಮಂದಿರಕೆ॥ಪ॥ ಮೊದಲಿಂದ ಬರಲಾರದೆ ನಾ ಬಂದೆ। ಇದರಿಂದ ಗೆದ್ದು ಪೋಪುದು ಕಾಣೆ ಮುಂದೆ। ತುದಿ ಮೊದಲಿಲ್ಲದೆ ಪರರಿಂದ ನೊಂದೆ। ಪದುಮನಾಭನೆ ತಪ್ಪು ಕ್ಷಮೆ ಮಾಡೊ ತಂದೆ॥1॥ ಹೆಣ್ಣು ಹೊನ್ನು ಮಣ್ಣಿನಾಸೆಗೆ ಬಿದ್ದು। ಪುಣ್ಯ ಪಾಪವನು ನಾ

ತಿಳಿಯದೆ ಇದ್ದು। ಅನ್ಯಾಯವಾಯಿತು ಇದಕೇನು ಮದ್ದು। ನಿನ್ನ ಧ್ಯಾನ ಎನ್ನ ಹೃದಯದೊಳಿದ್ದು॥2॥ ಹಿಂದೆ ನಾ ಮಾಡಿದ ಪಾಪವ ಕಳೆಯೆ। ಮುಂದೆನ್ನ ಜನ್ಮ ಸಫಲ ಮಾಡಿ ಪೊರೆಯೆ। ತಂದೆ ಶ್ರೀ ಪುರಂದರವಿಠಲನ್ನ ನೆನೆಯೆ। ಎಂದೆಂದಿಗಾನಂದ ಸುಖವನ್ನೆ ಕರೆಯೆ॥3॥

ಚರಣಮುಲೆ ನಮ್ಮಿತಿ ನೀ **ರಾಗ: ಆನಂದಭೈರವಿ, ಆದಿತಾಳ**

ಚರಣಮುಲೆ ನಮ್ಮಿತಿ ನೀ ದಿವ್ಯ॥ಪ॥ ವಾರಿಧಿ ಕಟ್ಟಿನ ವರ ಭದ್ರಾಚಲ ವರದ ವರದ ನೀ ದಿವ್ಯ॥ಅ.ಪ॥ ಆದಿಪುರುಷ ನನ್ನು ಅರಮರಸೇಯಕು। ಅಯ್ಯಾ ಅಯ್ಯಾ ಮಾಯಯ್ಯ ನೀ ದಿವ್ಯ॥1॥ ವನಮುನ ರಾತಿನಿ ವನಿತಗ ಜೇಸಿನ। ಚರಣಮು ಚರಣಮು ಚರಣಮು ನೀ ದಿವ್ಯ॥2॥ ಪಾದರವಿಂದಮೇ ಆಧಾರಮುನಿ ನೇನು। ಪಡಿತೀ ಪಡಿತೀ ಪಡಿತೀ ನೀ ದಿವ್ಯ॥3॥ ವೈಯಾರು ವಿಧಮುಲ ಕುಯ್ಯಾಲಗಿಂಚರ। ರಾವಯ್ಯ ರಾವಯ್ಯ ರಾವಯ್ಯ ನೀ ದಿವ್ಯ॥4॥ ಬಾಗುಗ ನನ್ನೇಲು (ವರ) ಭದ್ರಾಚಲ। ರಾಮ ದಾಸುಡ ದಾಸುಡ ದಾಸುಡ ನೀ ದಿವ್ಯ॥5॥

ಚರಣವ ತೋರೋ ಯದುವರ ಅರಸನೆ **ರಾಗ: ಶಹನ, ಆದಿತಾಳ**

ಚರಣವ ತೋರೋ ಯದುವರ ಅರಸನೆ ಚರಣವ ತೋರೋ॥ಪ॥ ಸ್ಮರಣಮಾತ್ರದೀ ಮುಕುತಿಯ ತೋರುವ ಚರಣವ॥ಅ.ಪ॥ ಗೋಕುಲ ಭೂಮಿಯ ಪಾವನ ಮಾಡಿದ। ಲೋಕವನೆಲ್ಲ ಅಡಗಿಸಿ ಕೊಂಡ ಚರಣವ॥1॥ ಬಿಡದೆ ಸರ್ವಜ್ಞತೀರ್ಥರಿಗೊಲಿದ। ಬಡವರ ಆಧಾರ ದಿವ್ಯ ವಿಭೂಷಣ ಚರಣವ॥2॥ ಕಡುಮುದ್ದು ವಿಜಯವಿಠಲ ನಿನ್ನ। ಉಡುಪಿ ಕ್ಷೇತ್ರದಲಿ ನಿಂದು ಪೂಜೆಯ ಕೊಂಬ ಚರಣವ॥3॥

ನರಸಿಂಹನ ಪಾದ ಭಜನೆಯ **ರಾಗ: ಹಿಂದೋಳ, ಆದಿತಾಳ**

ನರಸಿಂಹನ ಪಾದ ಭಜನೆಯ ಮಾಡೋ॥ಪ॥ ನರಸಿಂಹನ ಪಾದ ಭಜನೆಯ ಮಾಡಲು। ದುರಿತ ಪರ್ವತವ ಖಂಡಿಸುವ ಕುಲಿಶದಂತೆ॥ಅ.ಪ॥ ತರಳನ ಮೊರೆ ಕೇಳಿ ತವಕದಿಂದಲಿ ಬಂದು। ದುರುಳನ ಕರುಳ ತನ್ನ ಕೊರಳಲಿ ಧರಿಸಿದ॥1॥ ಸುರರೆಲ್ಲ ನಡುಗಲು ಸಿರಿದೇವಿ ಮೊರೆಯಿಡೆ। ವರ ಕಂಭದಿಂದ ಬಂದ ವೈಕುಂಠಪತಿ ನಮ್ಮ॥2॥ ಹರಿವಿರಿಂಚಾದಿಗಳು ಕರವೆತ್ತಿ ಮುಗಿಯಲು। ಪರಮ ಶಾಂತನಾದ ಪುರಂದರವಿಠಲ॥3॥

ನೀರಜಾಕ್ಷ ನಿನ್ನ ಪಾದ ತೋರೋದೆಂದಿಗೋ **ರಾಗ: ಹಿಂದೋಳ**

ನೀರಜಾಕ್ಷ ನಿನ್ನ ಪಾದ ತೋರೋದೆಂದಿಗೋ ಸ್ವಾಮಿ ವಾರಿಜಾಸನವಂದ್ಯ ಮುರಾರಿ ಕೃಷ್ಣನೇ॥ಪ॥ ಘೋರವಾದ ಭವವೆಂಬೊ ವಾರಿಧಿಯಲ್ಲಿ ಮುಳುಗಿ ಪಾರವಾಯಿತೆನ್ನ ಮಾನ ಮಾರಜನಕನೇ ಸಲಹೋ॥ಪ॥ ಒಂದು ದಿನ ನಿನ್ನ ಧ್ಯಾನ ಆನಂದದಿ ಮಾಡದೆ ನಾನು ಸುಂದರಿಯರನ್ನ ನೋಡಿ ಮಂದವಾದೆನೋಸ್ವಾಮಿ॥ ಹಿಂದಿನ ಕಾಲವ ಈವಿದಧಿ ಕಳೆದೆನೋ ದೇವ ಮುಂದಿನ ಗತಿಯ ತೋರೋ ಇಂದು ಸಲಹೋ ಇಂದಿರೇಶ॥1॥ ವಿತ್ತದಾಶೆಯಲ್ಲಿ ದೇಶ ಸುತ್ತಿ ಸತ್ಕೃತ್ಯವ ಬಿಟ್ಟು ಅಕೃತ್ಯವ ಮಾಡಿ ನಾನು ಮತ್ತನಾದೆನೋ ದೇವ॥ ಉತ್ತಮ ಜನರ ಸಂಗ ಹತ್ಯ ಮಾಡಿದಂಥಾ ಅಕಾಲಕೆ ಗುರಿಯಾದೆನೋ ಹಸ್ತಿವರದ ಎನ್ನ ಸಲಹೋ॥2॥ ಮುಪ್ಪಿ ವೈರ ಎನ್ನ ಘೋರ ಅಭೀಷ್ಟವೆಂಬೋ ಬೆಟ್ಟವನ್ನೇ ಕುಟ್ಟಿ ಹಿಟ್ಟುಮಾಡುವುದಕೆ ಗಟ್ಟಿಯಲ್ಲವೇ ದೇವ॥ ಎಷ್ಟು ಮೊರೆ ಇಟ್ಟರೂ ಎಳ್ಳಷ್ಟೂ ದಯಬಾರದೇಕೋ ಬೆಟ್ಟದೊಡೆಯ ಗೋಪಾಲ ವಿಠಲ ನೀನೆನ್ನ ಪೊರೆಯೋ॥3॥

ನಂಬಿದೆ ನಿನ್ನ ಪಾದವ ವೆಂಕಟರಮಣ **ರಾಗ: ಆರಭಿ**

ನಂಬಿದೆ ನಿನ್ನ ಪಾದವ। ವೆಂಕಟರಮಣ ನಂಬಿದೆ ನಿನ್ನ ಪಾದವಾ॥ಪ॥ ನಂಬಿದೆ ನಿನ್ನ ಪಾದಾಂಬುಜ ಯುಗಳವ । ಚಂದದಿಂ ಸಲಹೊ ಮಂದರಧರನೆ॥ಅ.ಪ॥ ತಂದೆಯಾಗಿ ನೀನೆ ತಾಯಿಯಾಗಿ ನೀನೇ। ಬಂಧು ಬಳಗವು ನೀನೆ। ಬಂದ

ದುರಿತವೆಲ್ಲ ಒಂದುಕೊಳ್ಳದೆ ನೀ ಬಂದೆನ್ನ ಸಲಹೊ ಮುಕುಂದ ಮುರಾರಿ।।1।। ಚಿಕ್ಕಂದು ಮೊದಲು ನಾನು ನಿನ್ನಯ ಪಾದ ಹೊಕ್ಕು ಜೀವಿಸುತಿಹೆನು। ಫಕ್ಕನೆ ಜ್ಞಾನವ ಅಕ್ಕರಿಂದಲೆ ಕೊಡು ಮಕ್ಕಳ ಮಾಣಿಕ್ಯ ರುಕ್ಮಿಣಿಯರಸಾ।।2।। ಮರೆತು ಮಾಯದೊಳ್ ಮುಳುಗಿದೆ ಮಾಯವರಿತು ಸ್ಥಿರವೆಂದು ಅರಿಯದಾದೆ। ಮರೆಯದೆ ಎನ್ನನು ಸಲಹೊ ಕೃಪಾನಿಧಿ ವರದ ಶ್ರೀ ವೆಂಕಟ ಪುರಂದರವಿಠಲ।।3।।

ನಂಬಿದೆ ನಿನ್ನ ಪಾದ ನರಸಿಂಹ **ರಾಗ: ಆರಭಿ, ಆದಿತಾಳ**

ನಂಬಿದೆ ನಿನ್ನ ಪಾದ ನರಸಿಂಹ। ಎನ್ನ ಬೆಂಬಿಡದೆ ಸಲಹಯ್ಯಾ ನರಸಿಂಹ।।ಪ।। ಹಂಬಲಿಸುವೆನು ಬಲು ನರಸಿಂಹ। ಪಾದ ನಂಬಿದವರನು ಕಾಯೋ ನರಸಿಂಹ।।ಅ.ಪ।। ತುಂಬುರು ನಾರದ ಪ್ರಿಯ ನರಸಿಂಹ। ಚೆಲ್ವ ಶಂಬರಾರಿಯ ಪಿತನೆ ನರಸಿಂಹ। ಅಂಬರೀಷನ ಕಾಯ್ವೆ ನರಸಿಂಹ। ಜಗದಂಬಾರಮಣನೆ ನರಸಿಂಹ।।1।। ಬಾಲ ಕರೆದಲ್ಲಿ ಬಂದೆ ನರಸಿಂಹ। ಭಕ್ತರ ಪಾಲಿಪ ದಯಾಳು ನರಸಿಂಹ। ಲೀಲೆಯಿಂದ ಹಿರಣ್ಯನ ನರಸಿಂಹ। ಕೊಂದಲೋಲ ಸಿರಿಯರಸನೆ ನರಸಿಂಹ।।2।। ಅಚ್ಚುತಾನಂತ ಗೋವಿಂದ ನರಸಿಂಹ। ಸಿರಿ ಸಚ್ಚಿದಾನಂದ ಮುಕುಂದ ನರಸಿಂಹ।। ಕಿಚ್ಚಿನಂದದಿ ಬಂದೆ ನರಸಿಂಹ। ಭವ ಇಚ್ಚೆಯ ಬಿಡಿಸಯ್ಯ ನರಸಿಂಹ।।3।। ಕರಿಯ ಮೊರೆಯನು ಕೇಳಿ ನರಸಿಂಹ। ಬಲು ಭರದಿಂದೊದಗಿ ಬಂದೆ ನರಸಿಂಹ। ಗರುಡವಾಹನನಾಗಿ ನರಸಿಂಹ। ಉದ್ಧರಿಸಿ ಕಾಯ್ದೆಯಲ್ಲೋ ನರಸಿಂಹ।।4।। ದೇವರ ದೇವನು ನೀನೇ ನರಸಿಂಹ। ಬೇರೆ ಕಾವರನ್ನು ಕಾಣೆನಯ್ಯ ನರಸಿಂಹ। ಭಾವಜನಯ್ಯ ಸಿರಿ ನರಸಿಂಹ। ನಿನ್ನ ಸೇವೆಯ ಪಾಲಿಸಿ ಕಾಯೋ ನರಸಿಂಹ।।5।। ತಂದೆ ತಾಯಿ ಗುರುದೈವ ನರಸಿಂಹ। ಎನ್ನ ಬಂಧುಬಳಗ ನೀನೇ ನರಸಿಂಹ। ಕುಂದು ಹಚ್ಚಿ ನೋಡಬೇಡ ನರಸಿಂಹ। ಪುರಂದರವಿಠಲ ಕಾಯೋ ನರಸಿಂಹ।।6।।

ಪಾದವ ನಂಬಿ ಪಾವನರಾಗಿರೋ **ರಾಗ: ವಸಂತ, ಆದಿತಾಳ**

ಪಾದವ ನಂಬಿ ಪಾವನರಾಗಿರೋ।।ಪ।। ಪದುಮನಾಭ ಅರವಿಂದನಯನನ ಹೃದಯದಲ್ಲಿ ಇಟ್ಟುಕೊಳ್ಳಿರೋ।।ಅ.ಪ.।। ಸಿರಿದೇವಿಯಿಂದಲಿ ಪೂಜಿಪಪಾದ। ಪರಬೊಮ್ಮನಿಂದಲಿ ವಂದಿತ ಪಾದ। ವರಧೃವರಾಯನು ಕಂಡಂಥ ಪಾದ। ತರುಣಿ ದ್ರೌಪದಿಯು ನೆನೆದಂಥ ಪಾದ।।1।। ಅಹಲ್ಯೆಯ ಶಾಪವ ಬಿಡಿಸಿದ ಪಾದ। ಗುಹನಿಂದ ತೊಳೆಸಿಕೊಂಡಂಥ ಪಾದ। ಮಹಿಮೆಯೆಲ್ಲವನು ಅಳೆದಂಥ ಪಾದ। ಅಹಿರಾಜನ ಲೋಕದಿ ಇರುವಂಥ ಪಾದ।।2।। ಇಟ್ಟಿಗೆ ಮೇಲೆ ನಿಂತಂಥ ಪಾದ। ಜಟ್ಟಿ ಚಾಣೂರನ ಕೊಂದಂಥ ಪಾದ। ಪುಟ್ಟ ಗೆಜ್ಜೆಯ ಕಟ್ಟಿದಂಥ ಪಾದ। ಇಷ್ಟಾರ್ಥಗಳನು ಹರಿಸುವ ಪಾದ।।3।। ಭಕುತರ ಆಪತ್ತು ಬಿಡಿಸುವ ಪಾದ। ಮುಕುತರ ಹೃದಯದಿ ನಲಿವಂಥಪಾದ। ಕಕುಲಾತಿಯನ್ನು ಬಿಡಿಸುವ ಪಾದ। ಸಕಲ ಪಾಪಂಗಳ ಸುಡುವಂಥಪಾದ।।4।। ಗಂಗಾಧರನು ಸ್ಮರಿಸುವ ಪಾದ। ಗಂಗಾಜನಕನ ಮಂಗಳ ಪಾದ। ರಂಗವರಾಹ ಹರಿ ವಿಠಲನ ಪಾದ। ಮಂಗಳವನ್ನು ಹರಸುವ ಪಾದ।।5।।

ಬಂದು ನಿಲ್ಲೋ ಕಣ್ಣ ಮುಂದೆ **ರಾಗ: ಕಾಂಭೋದಿ**

ಬಂದು ನಿಲ್ಲೋ ಕಣ್ಣ ಮುಂದೆ।।ಪ।। ಬಂದು ನಿಲ್ಲೋ ನಿನ್ನ ಪಾದಕ್ಕೆ ವಂದಿಪೆ। ಇಂದಿರೆಯರಸ ಗೋವಿಂದ ಮುಕುಂದನೇ।।ಅ.ಪ।। ಅರಳಿದ ಕೆಂದಾವರೆಯ ಧಿಕ್ಕರಿಸುವ। ಚರಣಾರವಿಂದವ ನಿರುತ ತೋರಿಸುತಲಿ।।1।। ನೀಲೋಲಕ ಭ್ರಮರ ಕುಂಡಲ ಮಂಡಿತ। ಮೇಲಾದ ರಾಕೇಂದು ಮುಖವ ತೋರಿಸುತಲಿ।।2।। ಪದುಮ ನೇತ್ರನೆ ನಿನ್ನ ಸದನವೆನ್ನುತ ಎನ್ನ। ಹೃದಯದೊಳಗಿಟ್ಟು ಮುದದಿ ಭಜಿಸುವಂತೆ।।3।। ಕರಿಯ ಮೊರೆಯ ಕೇಳಿ ಕರುಣದಿಂ ಬಂದಂತೆ। ಕರೆದಾಗ ನಿನ್ನ ದಿವ್ಯ ಚರಣವ ತೋರಿಸುತ।।4।। ಅಜಭವಾದಿಗಳಿಗೆ ನಿಜಪದವಿತ್ತಂತೆ। ಭಜಿಪ ಭಕ್ತರಿಗೊಲಿವ ವಿಜಯ ವಿಠಲರಾಯ।।5।।

ಭಜಿಸಿ ಬದುಕೆಲೋ ಮನುಜ **ರಾಗ: ಕಾಂಭೋಜಿ, ಝಂಪೆತಾಳ**

ಭಜಿಸಿ ಬದುಕೆಲೋ ಮನುಜ ಮನಮುಟ್ಟಿ ಶ್ರೀಹರಿಯ ಅಜ ಸುರೇಂದ್ರಾದಿಗಳು ಆದಿ ವಂದಿತ ಪಾದ।।ಪ।।

ಪಾಕಶಾಸನಗೊಲಿದು ಬಲಿಯ ಮೆಟ್ಟಿದ ಪಾದ। ಕಾಕು ಶಕಟನ ತುಳಿದು ಕೊಂದ ಪಾದ। ಲೋಕೇಶನಿಗೆ ಒಲಿದು ಪೂಜೆಗೊಂಬುವ ಪಾದ। ಲೋಕಪಾವನೆ ಗಂಗೆ ಜನಿಸಿದಾ ಪಾದ॥1॥ ಶಿಲೆಯ ಸತಿಯಳನು ಸೌಂದರ್ಯಗೊಳಿಸಿದ ಪಾದ। ಒಲಿದು ಪಾರ್ಥಗೆ ಧರೆಯನೊತ್ತಿದ ಪಾದ॥ ಕೊಲಿಸಿ ಕೌರವರ ಕಾಳಗದಿ ಕೆಡಹಿದ ಪಾದ। ಬಲಿದ ಕಾಳಿಂಗನನು ತುಳಿದ ಪಾದ॥2॥ ಗರುಡ ಶೇಷಾದಿಗಳು ಪೊತ್ತುಕೊಂಡಿಹ ಪಾದ। ಧರೆಯ ಈರಡಿ ಮಾಡಿ ಅಳೆದ ಪಾದ। ಸಿರಿ ತನ್ನ ತೊಡೆಯ ಮೇಲಿರಿಸಿ ಸೇವಿಸಿದ ಪಾದ। ವರಕಾಗಿನೆಲೆಯಾದಿ ಕೇಶವನ ಪಾದ॥3॥

ರಾಮನ್ನ ಪಾದ ಬಿಡದೆ ಭಜಿಸಿರೋ **ರಾಗ: ಶಿವರಂಜಿನಿ**

ರಾಮನ್ನ ಪಾದ ಬಿಡದೆ ಭಜಿಸಿರೋ ಒಳ್ಳೆ ಕಾಮಿತ ಫಲಗಳ ಪಡೆಯಿರೊ। ರಾಮನ್ನ ರಘುರಾಮನ್ನ ಸೀತೆಪ್ರೇಮನ್ನ ಜಯರಾಮನ್ನ॥ಪ॥ ಸಂಸಾರವೆಂಬೋದು ಬಹು ಹಿಂಸೆ ಕಾಣಿರೋ। ಈ ಸಂಶಯಗಳನ್ನೆ ಬಿಟ್ಟು ಸುಖಿಯಾಗಿರೋ। ಕಂಸನ್ನ ಮನ ಧ್ವಂಸನ್ನ ಮದುವಂಶನ್ನ ಪರಹಂಸನ್ನ॥1॥ ಹೆಣ್ಣು ಹೊನ್ನು ಮಣ್ಣು ಮೂರು ನಂಬಬೇಡಿರೊ। ಇವು ಎಣ್ಣೆ ಒಳಗೆ ಬಿದ್ದ ನೊಣವಿನಂತೆ ಕಾಣಿರೋ। ಹುಡುಗರು ಚಿಕ್ಕ ಮಕ್ಕಳು ಗೋಲಿ ಗಜ್ಜುಗ ಆಡುವಂದದಿ। ಬಣ್ಣ ಕೆಟ್ಟ ನೀವು ಕೆಡಬೇಡಿರೋ॥2॥ ಪಾಮರ ಶ್ರೀ ವಂಕಟದಾಸ ಪೊರೆಯುವನು। ಆತ್ಮ ರಾಮನಲ್ಲಿ ನೀವು ಸುಖಿಯಾಗಿರೋ। ನೇಮದಿ ಅತಿಪ್ರೇಮಾದಿ ಭಕ್ತಿಬಾವಾದಿ ಕಡುಬೇಗದಿ॥3॥

ಸಾಕು ಸಾಕು ಮನುಜಸೇವೆಯು **ರಾಗ: ವರಾಳಿ, ರೂಪಕತಾಳ**

ಸಾಕು ಸಾಕು ಮನುಜಸೇವೆಯು ಶ್ರೀರಂಗರಾಯ। ಸಾಕು ಸಾಕು ಮನುಜ ಸೇವೆಯು ಶ್ರೀರಂಗರಾಯ॥ಪ॥ ಸಾಕು ಸಾಕು ಮನುಜಸೇವೆ ಮಾಡಿ ಬೆಂದು ಬಳಲಿದೆನು। ಬೇಕು ನಿನ್ನ ಪಾದ ಭಜನೆ ಎಂದು ಬಯಸುತಲಿಹೆನು ರಂಗ॥ಅ॥ ಹೊತ್ತಾರೆದ್ದು ಹೋಗಿ ಪರರ ಚಿತ್ತ ವೃತ್ತಿಗಳನೆ ಪಿಡಿದು। ಭೃತ್ಯನಂತೆ ಹಲ್ಲುಕಿರಿದು ಕೆಲಸಮಾಡಿ ದಣಿಯುವೆ ರಿಕ್ತ ಹಸ್ತದಿಂದ ಮನೆಯ ಸೇರುವೆ ಈ ಉದರಕಾಗಿ। ಮತ್ತೆ ಕಂಡ ಕಡೆಗೆ ತಿರುಗುವೆ ಕಡೆಗೆ ಅಪರರಾತ್ರಿಯಲ್ಲಿ ತಿಂದು ಒರಗುವೆ॥1॥ ಸ್ನಾನ ಸಂಧ್ಯಾ ನೇಮನಿತ್ಯ ಜಪಗಳನ್ನೆ ಜರಿದು ಹೀನನಾಗಿ ಕೆಟ್ಟ ಜನರ ಮನೆಯ ಸೇರುವೆನೋ। ದಣಿದ ಶ್ವಾನದಂತೆ ದಿನವ ಕಳೆವೆನು ದುರಾಸೆಗಾಗಿ। ಮಾನಬಿಟ್ಟುಕೊಂಡು ಕುದಿವೆನು ಕಡೆಯಲ್ಲಿ ಎಳ್ಳು ಮೊನೆಯನಿತು ಸುಖ ಕಾಣೆನೊ॥2॥ ಒಡಲ ಆಸೆಗಾಗಿ ನೊಣವು ಕೊಡದ ಜೇನಿನಲ್ಲಿ ಬಿದ್ದು। ತೊಡಕಿದಂತೆ ಪಾಶದಲ್ಲಿ ಬಿದ್ದು ಬಾಯ ಬಿಡುತಲಿಹೆನು। ಬಿಡಿಸೋ ಎನ್ನ ಬಂಧ ಪಾಶವ ಪೊಡವಿಗೊಡೆಯ ನಾರಸಿಂಹ। ಮಾಧವನೇ ಬಿಸರುಹಾಕ್ಷ ಒಡೆಯ ಬಡದಾದಿ ಕೇಶವ॥

ಸ್ಮರಿಸು ಮನವೆ2 ಹರಿಯ ಚರಣ **ರಾಗ: ಯಮನ್‌ಕಲ್ಯಾಣಿ , ರೂಪಕತಾಳ**

ಸ್ಮರಿಸು ಮನವೆ ಸ್ಮರಿಸು ಮನವೆ ಹರಿಯ ಚರಣ ಕಮಲವ ಪೂರ್ಣ॥ಪ॥ ಶರಣ ಜನರನು ಪೊರೆದು। ರಕ್ಷಿಸುವ ಉರಗಶಯನನಾ ಸ್ಮರಿಸು॥ಅ.ಪ॥ ಇರುಳು ಹಗಲು ಸೆರಗವಿಡಿದು ಅರಿತು ಸ್ಮರಿಸಿ ಬೆರಸಿ ಚಿತ್ತವ। ಕರೆವ ಕಾಮಧೇನುವಾಗಿ ಹೊರೆವ ಕಲ್ಪತರುವನು ಸ್ಮರಿಸು॥1॥ ಬಿಡದೆ ಸ್ಮರಿಸು ಗೂಡಿನೊಳಗೆ ಪೊಡವಿಧರನ ಪಾದಪೂರ್ಣ। ಕೊಡುವ ಭಕ್ತಿ ಮುಕ್ತಿದಾತ ಮಹಿಪತಿಯ ಒಡೆಯನ ಸ್ಮರಿಸು॥2॥

ಭಕ್ತಿಗೀತೆ

ಈ ಪಾದ ಪುಣ್ಯಪಾದ ಈ ಪಾದ

ಈ ಪಾದ ಪುಣ್ಯಪಾದ। ಈ ಪಾದ ದಿವ್ಯಪಾದ ಮನೆಗೆ ಬಂದುಹೋದ ಪ್ರಥಮ ಗೋಪಪಾದ ಮರೆಯದೆ ಹೋದ ನನ್ನ ಈ ಕಳವಳಕೆ॥ ಈ ತೆರವೇಕೆ (2ಸಾರಿ) ಈ ಪಾದ ಪುಣ್ಯಪಾದ। ಮಾರ್ಕಂಡೇಯ ಕಂಡ ಪಾದ ಪ್ರಾಣಪಾದ

(2ಸಾರಿ) ದೇವರ ಕಣ್ಣಕಂಡ ಪರಮಪಾದ ಭಕ್ತ ಪಾದ।।2ಸಾರಿ।। ಆತ್ಮಲಿಂಗ ಸ್ವಯಂಪೂರ್ಣ ತಾನಾಗಿ ಬಂದರೂ ದಾಸೋಹಿ ಎಂದು ಅಯ್ಯೋ ಕಾಣದ ಅನಾಥನಾದೆ ಮಂಜುನಾಥ।। ಈ ಪಾದ ಪುಣ್ಯಪಾದ।। ಧರೆಯೊಳು ಧರ್ಮ ಪಾದ ಮನವ ಮುಟ್ಟಿಹೋದ ಪ್ರಣಯ ನಾಟ್ಯಪಾದ। ಮಣಿಯದೆ ಹೋದ ನನ್ನ ಈ ಶಿರವೇಕೆ - ಈ ಶಿರವೇಕೆ। ಈ ಪಾದ ಪುಣ್ಯಪಾದ। ಧರೆಯೊಳು ಧರ್ಮಪಾದ।। ಭಕ್ತ ಸಿರಿಯಾಳ ಕಂಡ ಪ್ರೇಮಪಾದ।।2ಸಾರಿ।। ಬ್ರಹ್ಮ ವಿಷ್ಣುವೇ ಮುಗಿದ ಆದಿಪಾದ ಅನಾದಿಪಾದ।।2ಸಾರಿ।। ಅನ್ನದಾತ ವಿಶ್ವನಾಥ ಲೀಲಾವಿನೋದಕೆ ತನ್ನ ಲೀಲಾ ವಿನೋದಕೆ ಅಯ್ಯೋ ಎನ್ನ ಸಿಂಧುಮಾಡಿದರೂ ಅಸಿಂಧುವಾದೆ ಈ ಪಾದ ಪುಣ್ಯಪಾದ। ಈ ಪಾದ ದಿವ್ಯಪಾದ। ಅರಸಿಬಂದ ಪಾವನ ಮೆರೆಸಬಂದ ಪಾದ। ಅರಿಯದೆ ಹೋದ ನನ್ನ ಈ ಅರಿವೇಕೆ ಈ ಅರಿವೇಕೆ ಈ ಪಾದ ಪುಣ್ಯಪಾದ।।

ಕಾಣದೆ ನಿಲ್ಲಲಾರೆ ಕಮನೀಯ **ರಾಗ: ಮಲಯಮಾರುತ**

ಕಾಣದೆ ನಿಲ್ಲಲಾರೆ ಕಮನೀಯ ಮೂರುತಿಯ। ಪ್ರಾಣೇಶನ ತೋರೇ ಗಿಣಿಯೆ।।ಪ।। ಮಾಣಿಕ್ಯ ಪದಕವ ಮನ್ನಿಸಿ ನಿನಗೀವೆ। ಜಾಣೆ ಕೃಷ್ಣನ ತೋರೆ ಗಿಣಿಯೆ। ಮಕರಾಕ್ಷ ಸಂಹರನ ಮಕರಾರಿರಕ್ಷಕನ। ಮಕರ ಶಿಕ್ಷಕನ ತೋರೆ ಗಿಣಿಯೆ।।1।। ಇಂದುಕುಲ ಪಾವನನ ಇಂದು ರವಿಲೋಚನನ। ಇಂದು ನೀ ಕರೆತಾರೆ ಗಿಣಿಯೆ। ಇಂದು ಶೇಖರನುತನ ಇಂದಿರೆಯರಸನ। ತಂದು ತೋರೆ ಮುದ್ದು ಗಿಣಿಯೇ।।2।। ಒಂದು ನಿಮಿಷವೊಂದು ಯುಗವಾಗಿ ತೋರಿತೆ। ಸೌಂದರ್ಯನ ತೋರೆ ಗಿಣಿಯೇ। ಮಂದ ಮಾರುತ ಸೋಕಿ ಮರುಳು ಗೊಂಡೆನೆ ಎನ್ನ। ಮಂದಿರಕೆ ಕರೆತಾರೆ ಗಿಣಿಯೆ।।3।। ಕಾಯಜನ ಬಾಣದಲಿ ಕಾಯವೆಲ್ಲವು ಬಹಳ। ಘಾಯವಾಯಿತು ನೋಡೆ ಗಿಣಿಯೆ। ಮಾಯೆಗಳ ಮಾಡದೆ ಮಮತೆಯಿಂದಲಿ ಎನ್ನ। ನಾಯಕನ ಕರೆತಾರೆ ಗಿಣಿಯೆ।।4।। ಪಂಕಜೋದ್ಭವ ಪಿತನ ಪಂಕಜನಯನನ। ಪಂಕಜನಾಭನ ತೋರೆ ಗಿಣಿಯೆ। ಪಂಕಜಾಕ್ಷ ಸಿರಿ ಕೃಷ್ಣನ ಪದಪದ್ಮ। ಶಂಕೆಯಿಲ್ಲದೆ ತೋರೆ ಗಿಣಿಯೆ।।5।।

ನಿನ್ ಮಲರ್ ಪಾದಂ (ತಮಿಳು) **ರಾಗ: ಆನಂದಭೈರವಿ**

ನಿನ್ ಮಲರ್ ಪಾದಂ ಪಣಿಂದೇನ್ ತಾಯೆ। ನೀಲ ಮೇಘವಣ್ಣನ್ ಮರುವುಂ। ರಂಗನಾಯಕಿ।।ಪ।। ಪೊನ್ನುಂ ಪೊರುಳುಂ ಕುರೆಯಾದ ನವನಿಧಿಯೆ। ನಿರೈಂದ ಸುಭಿಕ್ಷಮುಂ ತಂದರುಳ್ ತಾಯೆ।।1।। ಪಂಕಜವಲ್ಲಿಯೆ ಸ್ವರ್ಣರೂಪಿಣಿಯೆ। ಪಾರ್ಕಡಲಿಲ್ ತುಯಿಲುಂ ಎಂಗಳಿನ್ ದೇವಿಯೆ।।2।। ಇರುಕ್ಕರಂ ಪೋಟ್ರಿಡ ಪೊನ್ ಮಾರಿ ಪೊಳಿಂದನೆಯ್ಯೈ। ಸಕಲ ಸುಭಿಕ್ಷಮು ತಂದರುಳ್ ತಾಯೆ।।3।।

ಪಾದ ನಂಬಿದವರಿಗೆ ಭಯವಿಲ್ಲಾ **ರಾಗ: ಕಲ್ಯಾಣವಸಂತ**

ಪಾದ ನಂಬಿದವರಿಗೆ ಭಯವಿಲ್ಲಾ ಶ್ರೀ ನಾರಾಯಣನಪಾದ। ಆದಿ ಮೂರುತಿ। ವೇದ ಗೋಚರ। ಮಾಧವ ಮುರುಳೀ।। ನಾಥನ ದಿವ್ಯ।।ಪ।। ಪಾಲಿಸೀ ಸುರರನು। ಅದಿತಿಕಶ್ಯಪರಿಗೆ। ಬಾಲನಾಗಿ ವಾಮನಪೆಸರಿಂ। ಲೀಲೆಯಿಂದ ಇಳೆ ಮೂರಡಿ ಅಳೆಯುತ ಬಲಿಯ ಪಾತಾಳಕೆ। ತುಳಿದಿಹ ಹರಿಯಪಾದ।।1।। ವರನಾರಿಯು ಇಂದ್ರನೊಡನೇ ರಮಿಸಲು। ವರಗೌತಮಮುನಿ ಕಂಡು ಶಪಿಸಲು। ತರುಣಿ ಕಲ್ಲಾಗಿ ಧರೆಯ। ಮಧ್ಯದಲಿರೆ। ಚರಣದಿ ಅಹಲ್ಯೆಯ। ಸಲಹಿದ ರಾಮನ।।2।। ಕಾಳಂದಿನದಿಯಲಿ। ಲೀಲೆ ಇಂದುಮುಖಿ। ಕಾಲಲಿಂದಿಗೆ ಗೆಜ್ಜೆ। ಫಲಿಗಲಿರೆನ್ನುತಾ। ಕಾಳಿಂಗ-ನ್ಹೆಡೆಯೊಳು। ನಾಟ್ಯವನಾಡಿದಾ। ಲೀಲೆವಿಗ್ರಹ ಭಕ್ತ। ಪಾಲಶ್ರೀ ನರಹರಿಯ।।3।।

ವಾರಿಜ ಶಯನನೆ ಧೀರ **ರಾಗ: ಮಧ್ಯಮಾವತಿ**

ವಾರಿಜ ಶಯನನೆ ಧೀರ ಶ್ರೀರಾಮನೆ। ನಾರಿ ಜಾನಕಿ ಪತಿ ರಾಮನೇ ನಿಮ್ಮ। ಚರಣಕಭಿ- ವಂದಿಸುವೆ।।1।। ಅಶೋಕ ವನದಲ್ಲಿ ಶೋಕವ ಮಾಡುತ ಪ್ರಲಪಿಸುತಿರುವ ಸೀತಾಪತಿಯೇ ನಿಮ್ಮ। ಚರಣಕಭಿವಂದಿಸುವೆ।।2।। ಶ್ರೀಕಟ್ಟೆಯೊಳ್ ಚುಂಚನಾ। ಕಟ್ಟೆಯೋಳ್ ನೆಲಸಿದ। ದಿಟ್ಟ ಶ್ರೀರಾಮರ ಭಕ್ತಳು ನಿಮ್ಮ ಚರಣಕಭಿವಂದಿಸುವೆ।।3।।

ಶ್ರೀಕೃಷ್ಣ ಶ್ರೀಪಾದ ಶ್ರೀವರದ **ರಾಗ: ಜುಂಜೋಟಿ**

ಶ್ರೀಕೃಷ್ಣ ಶ್ರೀಪಾದ ಶ್ರೀವರದ ಶೌರೆ। ಸಿರಿ ಎಡೆಗೆ ಶಿರವಿಡುವೆ ಕಾಯೋ ಮುರಾರೆ ಶ್ರೀಕೃಷ್ಣಶೌರೆ ಎಂದವರ ನೊಂದವರ ಭಕ್ತಜನ ಭಂಡಾರ। ದ್ವಾಪರಯುಗ ಅವತಾರ ಜಗದೋದ್ಧಾರ॥1॥ ಯೋಗೇಶ ಭೋಗೇಶ ಲೋಕೇಶ ತಂದೆ। ಇಷ್ಟು ಹೊತ್ತರು ಯೋಗ ಮಾಯೆಯಲಿ ನಿಂದೆ। ಮೌನವತೆಯಲಿ ಬಂದೆ ಅತಿ ಮಾನವತೆ ತೋರ್ದೆ। ಧರ್ಮವೇ ಜಯವೆಂದು ಜಗಕೆಲ್ಲ ಸಾರ್ದೆ॥2॥

ಸತ್ಯ ಧರ್ಮಗಳೇ ಈ ಪಾದ ಕಮಲಗಳು

ಸತ್ಯ ಧರ್ಮಗಳೇ ಈ ಪಾದ ಕಮಲಗಳು। ಲಕ್ಷ್ಮೀಯು ಸೇವಿಸುವ ಶ್ರೀಹರಿ ಚರಣಗಳು। ದರುಶನ ಮಾತ್ರದಲೆ ಕಳೆದವು ಪಾಪಗಳು। ನಂಬದವರಿಗೆಲ್ಲ ಹುಟ್ಟುಸಾವಿನ ನೋವುಗಳು॥1॥ ಕತ್ತಲಿಂದ ನಿನ್ನ ಎಂದೂ ಬೆಳಕಿಗೆ ನಡೆಸುವುದು। ಉತ್ತಮ ಮಾರ್ಗದಲಿ ಕೈ ಹಿಡಿದು ನಡೆಸುವುದು। ಬದುಕಿನ ಅರ್ಥವನು ಬಿಡದೆ ಕಲಿಸುವುದು। ನೆಮ್ಮದಿ ಶಾಂತಿಯನು ಬಾಳಲಿ ತುಂಬುವುದು॥2॥ ನಯನ ಕಮಲದಿಂದ ಪೂಜೆಯನ್ನುಮಾಡು। ಮನದ ಗಂಗೆಯಿಂದ ಅಭಿಷೇಕಮಾಡು। ಶಿರವ ಚರಣದಲ್ಲಿ ಧ್ಯಾನಮಾಡು। ಸುಲಭದಲ್ಲಿ ಆಗ ವೈಕುಂಠ ನಿನದು ನೋಡು॥

ಈಶ ನಿನ್ನ ಚರಣ ಭಜನೆ (ಸ್ಮರಣೆ) **ರಾಗ: ಸಾವೇರಿ, ರೂಪಕತಾಳ**

ಈಶ ನಿನ್ನ ಚರಣಭಜನೆ ಆಸೆಯಿಂದ ಮಾಡುವೆನು। ದೋಷರಾಶಿ ನಾಶಮಾಡು ಶ್ರೀಶ ಕೇಶವ॥ಪ॥ ಶರಣುಹೊಕ್ಕೆನಯ್ಯ ಎನ್ನ ಮರಣಸಮಯದಲ್ಲಿ ನಿನ್ನ ಚರಣಸ್ಮರಣೆ ಕರುಣಿಸಯ್ಯ ನಾರಾಯಣ॥1॥ ಶೋಧಿಸೆನ್ನ ಭವದ ಕಲುಷ ಭೋಧಿಸಯ್ಯ ಜ್ಞಾನವೆನಗೆ। ಬಾಧಿಸುವಾ ಯಮನ ಬಾಧೆ ಬಿಡಿಸು ಮಾಧವಾ॥2॥ ಹಿಂದನೇಕ ಯೋನಿಗಳಲ್ಲಿ ಬಂದು ಬಂದು ನೊಂದೆ ನಾನು। ಇಂದು ಭವದ ಬಂಧ ಬಿಡಿಸು ತಂದೆ ಗೋವಿಂದಾ॥3॥ ಭ್ರಷ್ಟನೆನಿಸಬೇಡ ಕೃಷ್ಣ ಇಷ್ಟು ಮಾತ್ರ ಬೇಡಿಕೊಂಬೆ। ಶಿಷ್ಟರೊಡನೆ ಇಟ್ಟು ಕಷ್ಟ ಬಿಡಿಸು ವಿಷ್ಣುವೆ॥4॥ ಮೊದಲು ನಿನ್ನ ಪಾದಪೂಜೆ ಮುದದಿ ಮಾಡುವೆನ್ನೆ ನಾನು ಹೃದಯದೊಳಗೆ ಹುದುಗಿಸಯ್ಯ ಮಧುಸೂಧನಾ॥5॥ ಕವಿದುಕೊಂಡು ಇರುವ ಪಾಪ ಸವೆದು ಹೋಗುವಂತೆ ಮಾಡಿ ಜವನ ಬಾಧೆಯನ್ನು ಬಿಡಿಸು ಶ್ರೀ ತ್ರಿವಿಕ್ರಮ॥6॥ ಕಾಮಜನಕ ನಿನ್ನ ನಾಮ ಪ್ರೇಮದಿಂದ ಪಾಡುವಂಥ ನೇಮವೆನಗೆ ಪಾಲಿಸಯ್ಯ ಸ್ವಾಮಿ ವಾಮನಾ॥7॥ ಮದನನಯ್ಯ ನಿನ್ನ ಮಹಿಮೆ ವದನದಿಂದ ನುಡಿಯುವಂತೆ ಹೃದಯದಲ್ಲಿ ಸದನ ಮಾಡು ಮುದದಿ ಶ್ರೀಧರಾ॥8॥ ಹುಸಿಯನಾಡಿ ಹೊಟ್ಟೆ ಹೊರೆವ ವಿಷಯದಲ್ಲಿ ರಸಿಕನೆಂದು ಹುಸಿಗೆ ನೀನು ಹಾಕದಿರೋ ಹೃಷಿಕೇಶನೆ॥9॥ ಅಬ್ಧಿಯೊಳಗೆ ಬಿದ್ದು ನಾನು ಒದ್ದುಕೊಂಬೆನಯ್ಯ ಭವದಿ ಗೆದ್ದು ಪೋಪ ಬುದ್ಧಿ ತೋರೋ ಪದ್ಮನಾಭನೆ॥10॥ ಕಾಮ ಕ್ರೋಧ ಬಿಡಿಸಿ ನಿನ್ನ ನಾಮ ಜಿಹ್ವೆಯೊಳಗೆ ನುಡಿಸು ಶ್ರೀ ಮಹಾನುಭಾವನಾದ ದಾಮೋದರಾ॥11॥ ಪಂಕಜಾಕ್ಷ ನೀನು ಎನ್ನ ಮಂಕುಬುದ್ಧಿ ಬಿಡಿಸಿ ನಿನ್ನ ಕಿಂಕರನನು ಮಾಡಿಕೊಳ್ಳೊ ಸಂಕರ್ಷಣ॥12॥ ಏಸು ಜನ್ಮ ಬಂದರೇನು ದಾಸನಲ್ಲವೇನು ನಾನು ಘಾಸಿಮಾಡದಿರು ಇನ್ನು ವಾಸುದೇವನೆ॥13॥ ಬುದ್ಧಿಶೂನ್ಯನಾಗಿ ನಾನು ಕದ್ದ ಕಳ್ಳನಾದೆ ಎನ್ನ ತಿದ್ದಿ ಹೃದಯ ಶುದ್ಧ ಮಾಡು ಪ್ರದ್ಯುಮ್ನನೆ॥14॥ ಜನನಿ ಜನಕ ನೀನೆಯೆಂದು ನೆನೆವೆನಯ್ಯಾ ದೀನಬಂಧು ಎನಗೆ ಮುಕ್ತಿ ಪಾಲಿಸಿಂದು ಅನಿರುದ್ಧನೆ॥15॥ ಹರುಷದಿಂದ ನಿನ್ನ ನಾಮ ಸ್ಮರಿಸುವಂತೆ ಮಾಡು ಪ್ರೇಮ ಇರಿಸು ನಿನ್ನ ಚರಣದಲ್ಲಿ ಪುರುಷೋತ್ತಮಾ॥16॥ ಸಾಧುಸಂಗ ಕೊಟ್ಟು ನಿನ್ನ ಪಾದಭಜಕನೆನಿಸು ಎನ್ನ ಭೇದಮಾಡಿ ನೋಡದಿರು ಅಧೋಕ್ಷಜಾ॥17॥ ಚಾರುಚರಣ ತೋರಿ ಎನಗೆ ಪಾರುಗಾಣಿಸಯ್ಯ ಕೊನೆಗೆ ಭಾರ ಹಾಕಿರುವೆ ನಿನಗೆ ನಾರಸಿಂಹನೆ॥18॥ ಸಂಚಿತಾರ್ಥ ಪಾಪಗಳನು ಕಿಂಚಿತಾದಿಪೀಡೆಗಳು ಮುಂಚಿತವಾಗಿ ಕಳೆಯಬೇಕು ಸ್ವಾಮಿ ಅಚ್ಯುತಾ॥19॥ ಜ್ಞಾನಭಕ್ತಿ ಕೊಟ್ಟು ನಿನ್ನ ಧ್ಯಾನದಲ್ಲಿ ಇಟ್ಟು ಎನ್ನ ಹೀನಬುದ್ಧಿ ಬಿಡಿಸೊ ಮುನ್ನ ಜನಾರ್ದನಾ॥20॥ ಜಪ ತಪಾನುಷ್ಠಾನ ನೀನು ಒಪ್ಪುವಂತೆ ಮಾಡಲಿಲ್ಲ ತಪ್ಪುಕೋಟಿ ಕ್ಷಮಿಸಬೇಕು ಉಪೇಂದ್ರನೆ॥21॥ ಮೊರೆಯ ಇಡುವೆನಯ್ಯಾ ನಿನಗೆ ಸೆರೆಯ ಬಿಡಿಸು ಭವದ ಎನಗೆ ಇರಿಸು ಭಕ್ತರೊಳಗೆ ಪರಮ ಪುರುಷ ಶ್ರೀಹರೆ॥22॥ ಪುಟ್ಟಿಸಲು ಬೇಡವಿನ್ನು ಪುಟ್ಟಿಸಿದಕೆ ಪಾಲಿಸಿನ್ನು ಇಷ್ಟು ಬೇಡಿಕೊಂಬೆ ನಾನು ಶ್ರೀ ಕೃಷ್ಣನೇ॥23॥ ಸತ್ಯವಾದ ನಾಮಗಳನು ನಿತ್ಯದಲ್ಲಿ ಪಠಿಸುವವನ

ಅರ್ಥಿಯಿಂದ ಸಲಹುವನು ಕರ್ತೃಕೇಶವ॥24॥ ಮರೆತುಬಿಡದೆ ಹರಿಯನಾಮ ಬರೆದು ಓದಿ ಕೇಳಿದರಿಗೆ ಕರೆದು ಕೊಡುವ ಮುಕ್ತಿ ಬಾಡದಾದಿಕೇಶವ॥25॥

ಕೀರ್ತನೆ

ಅಪರಾಧಮುಲ ಮಾನ್ಪಿಯಾದುಕೋವಯ್ಯ **ರಾಗ: ದರ್ಬಾರು, ಝಂಪೆತಾಳ**

ಅಪರಾಧಮುಲ ಮಾನ್ಪಿಯಾದುಕೋವಯ್ಯ॥ಪ॥ ಕೃಪಜೂಚಿ ಬ್ರೋಚಿನ -ಕೀರ್ತಿ ಗಲದಿಕ ನೀಕು॥ಅ.ಪ॥ ಅತ್ಯಂತ ಮತ್ಸರ ಮದಾಂಧುಡೈ ಸಜ್ಜನುಲ ನಿತ್ಯ ಕರ್ಮಮುಲವಲೇ ನಿಂದಿಂಚುಕೊನ್ನ ನಾ॥1॥ ಚೂಚುವಾರಲ ಕೆದುಟ ಸೊಕ್ಕಿ ಜಪಿತುಡುನೈತಿ ಯೋಚಿಂಚ ನೀ ಪಾದಯುಗಳ ಧ್ಯಾನಮುಲೇನಿ॥2॥ ಸ್ತ್ರೈಣ ಜನುಲನು ಗೂಡಿ ವೀಣಾಡಿತಿನಿಗಾನಿ ಪ್ರಾಣಹಿತ ಗುಣ ಕಥಲ ಬಲ್ಕ ಲೇನೈತಿನಾ॥3॥ ಶರಣು ಜೊಚ್ಚಿನ ನನ್ನು ಕರುಣಿಂಚವೇ ರಾಮ ವರತ್ಯಾಗರಾಜನುತ ವಶಮುಗಾದಿಕ ನಾದು॥4॥

ಕಲಿಗಿಯುಂಡಿನ ಗದಾ **ರಾಗ: ಕೀರವಾಣಿ, ಆದಿತಾಳ**

ಕಲಿಗಿಯುಂಡಿನ ಗದಾ ಗಲ್ಗುನು ಕಾಮಿತ ಫಲದಾಯಕ॥ಪ॥ ಕಲಿನ ಯಿಂಗಿತ ಯೆರುಗಕ ನಿನ್ನಾಡು ಕೊಂಟಿ ಚಲಮುಜೇಯಕ ನಾತಲನು ಚಕ್ಕನಿ ವ್ರಾತ॥ಅ.ಪ॥ ಭಾಗವತಾಗ್ರೇಸರುಲಗು ನಾರದ ಪ್ರಹ್ಲಾದ ಪರಾಶರ ರಾಮದಾಸುಲು। ಬಾಗುಗ ಶ್ರೀರಘುರಾಮುನಿ ಬಾದಮುನ ಭಕ್ತಿ ಜೇಸಿನ ರೀತಿ ತ್ಯಾಗರಾಜುನಿಕಿಪುಡು ॥ಕಲಿಗಿಯುಂಟೆ॥

ದೇವ ದೇವ ಕಲಯಾಮಿ **ರಾಗ: ಮಾಯಾಮಾಳವಗೌಳ, ರೂಪಕತಾಳ**

ದೇವ ದೇವ ಕಲಯಾಮಿ ತೇ ಚರಣಾಂಬುಜ ಸೇವನಂ॥ಪ॥ ಭುವನತ್ರಯ ನಾಯಕ ಭೂರಿ ಕರುಣಯಾ ಮಮ ಭವತಾಪಮಖಿಲಂ ವಾರಯ ರಮಾಕಾಂತ॥ಅ.ಪ॥ ಜಾತರೂಪ ನಿಭಚೇಲ ಜನ್ಮಾರ್ಜಿತ ಮಮಾಖಿಲ ಪಾತಕ ಭಯ ಹರಾಮಿಹ ತಾರಯ ಕರುಣಯಾ। ದಿತಿಜಾಳಿ ವಿದಹನ ದೀನಬಂಧು ಮಾಮವ ಶ್ರಿತ ವಿಬುಧಪಾಲ ಶ್ರೀ ಪದ್ಮನಾಭ ಶೌರೇ॥ಚರಣ॥

ನಟನ ಮಾಡಿಡುಂ ಪಾದಮೇ (ತಮಿಳು) **ರಾಗ: ಆರಭಿ, ಆದಿತಾಳ**

ನಟನ ಮಾಡಿಡುಂ ಪಾದಮೇ ಎನ್ರುಂ ನಮ್ಮೈ ಕಾರ್ತಿಡುಂ ಪಾದ ಮೇ॥ಪ॥ ದಿಡ ಮದಾಯ್ ಅಣ್ಬರ್ ತಿರುವುಳ್ಳಂ ಅದನಿಲೇ ತಿಗೈ ಪುರವೇ ದಿನಂ ಧಿಮಿ ಧಿಮಿ ಧಿಮಿ ಎನ॥ನಟನ॥ ತುಂಬುರು ನಾರದರ್ ಸ್ತೋತಿರಂ ಪಾಡಿಡ ತೂಯ್‌ಮೈ ಮಿಗುಂ ತೊಂಡರ್ ತುಯರ್ ಪರಂದೋಡಿಡ ಅಂಬಲಂ ತನ್ನಿಲ್ ಎನ್ರುಂ ಆನಂದ ನಟಮಿಡ ಅಮ್ಮೈ ಶಿವಕಾಮಿಯು ಕೂಡ ಇರಂದಿಡ॥ನಟನ॥

ನೀದು ಚರಣಮುಲೆ ಗತಿಯನಿ **ರಾಗ: ಸಿಂಹೇಂದ್ರಮಧ್ಯಮ, ತ್ರಿಪುಟತಾಳ**

ನೀದು ಚರಣಮುಲೆ ಗತಿಯನಿ ನೆರ ನಮ್ಮಿನ ವಾಡನುರ ಓ ರಾಮ॥ಪ॥ ವೇದ ವೇದಾಂಗ ವಿದುಡನಿ ವೆಲಯು ಶ್ರೀ ಸರ್ವೇಶ್ವರಾ ರಾಮ॥ಅ.ಪ॥ ಪಾಪ ಕರ್ಮಪು ದನುವುರಾ (ಗುಂಟರಾ) ಯಿಂದು। ಬಾಧಪಡನೇ ಜಾಲರಾ ಯೇಲಾಗುನೈನ ನನ್ನೇಲುಕೋರ ತ್ಯಾಗರಾಜ ವಿನುತ ರಾಮ॥ನೀದು॥

ರಘು ನಾಯಕ ನೀ — ರಾಗ: ಹಂಸಧ್ವನಿ, ಆದಿತಾಳ

ರಘು ನಾಯಕ ನೀ ಪಾದಯುಗ ರಾಜೀವ ಮುಲ ನೇ ವಿಡಜಾಲ ಶ್ರೀ॥ಪ॥ ಅಘಜಾಲಮುಲ ಬಾರದೋಲಿ ನನ್ನಾದರಿಂಪ ನೀವೇ ಗತಿಗಾದ ಶ್ರೀ॥ಅ.ಪ॥ ಭವಸಾಗರಮು ದಾಟಲೇಕನೆ ಬಹು ಗಾಸಿಬಡಿ ನೀ ಮರುಗು ಜೇರಿತಿನಿ ಅವನಿಜಾಧಿಪಾ ಶ್ರಿತರಕ್ಷಕ ಆನಂದಕರ ಶ್ರೀ ತ್ಯಾಗರಾಜನುತ॥ಚರಣ॥

ರಾ2 ರಾಜೀವಲೋಚನ — ರಾಗ: ಮೋಹನ, ಆದಿತಾಳ

ರಾ ರಾ ರಾಜೀವಲೋಚನ ರಾಮ ನನ್ನು ಬ್ರೋಚುಟಕು ಧೀರಾಶ್ರಿತಜನ ಮಂದಾರ ಕರುಣಾಪಾರ ವಾರ॥ಪ॥ ಏರಾ ನೀ ಕರುಣ ಗಲ್ಗನಿ ಕಾರಣಮೇಮೋ ಗಾನರಾ ಮಾರಾರಿ ವಿನುತ ಶುಭದ ಸುಚರಿತ ಪರಾತ್ಪರಾ ಧರಣಿಜಾ ಮನೋಹರ॥ಅ.ಪ॥ ನೀವೇನಾ ವಿಭುಡನಿ ನಿರತಮು ನೀ ಪಾದಮುಲನು ನೆರೆನಮ್ಮಿತಿ ನೀವಾಡನಿ ನನ್ನು ಕರುಣಿಂಚಿ ಈ ವೇಳಾ ನಾ ಚೈವಿಡವಕುರಾ ದೇವದೇವ ದಶರಥ ನೃಪನಂದನ ದಶಮುಖಾದಿ ಸಕಲರಿಪುಗಣಹರಣ। ನೀವನಾಧರಣ ಸೇಯಕುರಾ ಪವನಜಾಪ್ತ ಶ್ರೀ ವಾಸುದೇವ॥ಚರಣ॥ ಚಿಟ್ಟೆಸ್ವರ ॥ ಸಾ ಪಾ ಧಸರಿಗ ಸಾರಿಧಸಪಧ । ಗಾ ಪಾ ರೀ । ೯ಗಾಪಾಧಾರಿ ॥ ॥ ಸರಿಗಸಾರಿ ಧರಿಸಧಾಪ ಗರಿಸದ । ಸಾ ರೀ ಗಪಧ । ರಿಸಧಪ ಧಾಧಾ ॥ ॥ ಪಧಧಸಾ ಸರೀ ರಿಗರಿ ಪಗಗರಿಸ । ಗರಿಗಸಾರಿಧಾ । ಸಪಾಧ ಗಪಧಸ ॥ ॥ ರಿಸಾಧಪಗರಿ ಸಗಪಧ ಸರಿಗಸಾ । ೯ಪಧಸಪಾಸ । ರಿಗಸಾಸರಿಗ ॥

ಆರತಿ

ಆರತಿ ಬೆಳಗುವೆ ಪಾದುಕೆಗೆ

ಆರತಿ ಬೆಳಗುವೆ ಪಾದುಕೆಗೆ ಮಂಗಳಾರತಿ ರಾಮನ ಪಾದುಕೆಗೆ॥ಪ॥ ಪಿತನ ವಾಕ್ಯವನು ಪಾಲಿಸಲೋಸುಗ ಅಡವಿಯ ಸಾರುತ ಕಷ್ಟವ ಸಹಿಸಿ। ಸತತ ನಂಬಿದರ ಬಿಡದೆ ಸಲಹುತಿಹ ರತಿಪತಿ ಪಿತನಡಿ ಧರಿಸಿಹ ಪಾದುಕೆಗೆ॥1॥ ಅಣ್ಣ ವನಕೆ ತೆರಳಿಹ ವಾರ್ತೆಯ ಕೇಳಿ। ಸಣ್ಣವನಾ ರಾಜ್ಯಭಾರ ಬೇಡೆಂದು। ಚಿಣ್ಣನ ಸಲಹೆಂದು ಅಳುತಿಹ ತಮ್ಮಗೆ। ಅಣ್ಣ ರಾಘವನೊಲಿದಿತ್ತಿಹ ಪಾದುಕೆಗೆ॥2॥ ರಾಮರಾಮಾ ಎಂದು ನಂದಿಗ್ರಾಮಕೆ ಬಂದು ನಿರತವಲ್ಲೇ ನಿಂದು ಸಿಂಹಾಸನದಿ। ಘನ ವಿಜೃಂಭಣೆಯಿಂದ ಭರತ ತಾ ಪಟ್ಟಾಭಿಷೇಕಗೈದ ಪಾದುಕೆಗೆ॥3॥ ನಂಬಿದವರ ಬೆಂಬಿಡದಲೇ ಪೊರೆಯುವ ಹಂಬಲಿಸಿದವರನು ಸತತ ರಕ್ಷಿಸುವ। ಕುಂಭಿನಿಪತಿ ಹರಿದಾ ಕೇಶವನುತ ನಂಬಿದ ತಮ್ಮಗೆ ಒಲಿದಿತ್ತ ಪಾದುಕೆಗೆ॥4॥

ಏಕಾರತಿಯ ನೋಡುವ ಬನ್ನಿ — ರಾಗ: ಪೂರ್ವಿಕಲ್ಯಾಣಿ, ಆದಿತಾಳ

ಏಕಾರತಿಯ ನೋಡುವ ಬನ್ನಿ। ನಮ್ಮ ಲೋಕನಾಥನ ಸಿರಿ ಪಾದಕ್ಕೆ ಬೆಳಗುವ॥ಪ॥ ಹರುಷದಿಂದಲಿ ಏಕಾರತಿಯ ಬೆಳಗಲು। ನರಕದಿಂದುದ್ಧಾರ ಮಾಡುವನು। ಪರಮ ಭಕುತಿಯಿಂದ ಬೆಳಗುವ ನರರನು। ಹರಿ ತನ್ನ ಉದರದೊಳಿರಿಸುವನು॥॥1॥ ತುಪ್ಪದೊಳ್ಬೆರೆಸಿದ ಮೂರು ಬತ್ತಿಯನಿಟ್ಟು। ಒಪ್ಪುವ ದೀಪಕ್ಕೆ ದೀಪ ಹಚ್ಚಿ ತಪ್ಪದೆ। ಸಕಲ ಪಾಪಗಳ ಸಂಹರಿಸುವ। ಅಪ್ಪ ವಿಠ್ಠಲನ್ನ ಪಾದಕ್ಕೆ ಬೆಳಗುವ॥2॥ ಅನ್ಯಚಿಂತೆಯ ಮಾಡದನ್ಯರ ಭಜಿಸದೆ। ಅನ್ಯ ದೇವರುಗಳ ಸ್ಮರಿಸದಲೆ। ಅನನ್ಯವಾಗಿ ಶ್ರೀ ಪುರಂದರವಿಠಲನ್ನ। ಘನ್ನನಾಮಂಗಳ ಧ್ಯಾನಿಸುತ್ತಲಿನ್ನು॥3॥

ಮಂಗಳ

ಇನಕುಲದೊಳವತರಿಸಿ ವನಕೆ

ಇನಕುಲದೊಳವತರಿಸಿ ವನಕೆ ಗಮಿಸಿದ ಪಾದ। ಜನಕರಾಯನು ತನ್ನ ಕರದೊಳರ್ಚಿಸಿದ ಪಾದ। ಸನಕ ಮುನಿ ಮೊದಲಾದವರ ಮನಕೆ ಗೋಚರವಾದ। ಕನಕಮಣಿ ಖಚಿತದಾ ಪಾದುಕೆಯುಳ್ಳ। ಶ್ರೀಪಾದ ಪಾದಾವಧಾನ ಶ್ರೀಪಾದಕ್ಕೆ

ಮಂಗಳಂ॥ಪ॥ ಗೋಕುಲದೊಳಾಡುತಿಹ ಶ್ರೀಕರದ ಶ್ರೀಪಾದ। ವ್ಯಾಕುಲವ ಪರಿಹರಿಸಿ ಪೊರೆವ ಪಾದ। ಜೋಕೆಯಲಿ ಕಡಹದಾ ವೃಕ್ಷವೇರಿದ ಪಾದ। ಭೀಕರದ ಫಣಿಶಿರದಿ ತಾ ಕುಣಿದ ಶ್ರೀಪಾದ॥1॥ ಚಲನವಿಲ್ಲದೆ ಇಳೆಯನೆಳೆದು ತೋರಿದ ಪಾದ। ಬಲಿಯ ಭಕುತಿಗೆ ಮೆಚ್ಚಿ ತುಳಿದ ಪಾದ। ಶಿಲೆಗೆ ಸೋಕಲು ಕನ್ಯಾ ಮಣಿಯನು ಗೈಸಿದ ಪಾದ॥ ಇಳೆಗೆ ಕೌರವನ ಪೀಠವನು ಉರುಳಿಸಿದ ಶ್ರೀಪಾದ॥2॥ ಸಾಗರಾತ್ಮಜೆ ತರದಿ ಪಿಡಿದು ಒತ್ತಿದ ಪಾದ। ನಗರದಾ ಸೇತುವೆಗೆ ಭೋಗವಿತ್ತ ಪಾದ। ನಾಗಶಯನದೊಳಿರುತ ನಲಿದು ನೀಡಿದ ಪಾದ। ಜಗನಗರದೊಳ್ ವಿದುರನಾಲಯದೊಳಿದ್ದ ಶ್ರೀಪಾದ॥3॥ ಕರದಿ ವಾಜಿಯ ಪಿಡಿದು ರಥ ವಿರಾಜಿಪ ಪಾದ। ಕರದಿ ಚಕ್ರದಿ ಭೀಷ್ಮನೆರಗಿದಪಾದ। ತರಣಿ ತನಯನ ಶಿರಕೆ ತೇರನೊತ್ತಿದ ಪಾದ। ತರುಣಿ ದ್ರೌಪದಿ ಬಿಡದೆ ಧ್ಯಾನಿಸುವ ಶ್ರೀಪಾದ॥4॥ ಗರುಡ ಗಂಧರ್ವರು ಬಿಡದೆ ಧ್ಯಾನಿಪ ಪಾದ। ಭರದಿ ಶಕಟಾಸುರನ ಒಡೆದ ಪಾದ। ಕಲಿ ಸುಯೋಧನನ ಓಲಗದಿ ಕೆಡಹಿದ ಪಾದ। ಬಿಡದೆ ಶ್ರೀಲಕ್ಷ್ಮಿಯು ಒತ್ತುತಿಹ ಶ್ರೀ ಪಾದ॥5॥ ಭಾಗವತರನ್ನು ದಿನದಿ ಪಾಡಿ ಪೊಗಳುವ ಪಾದ। ಬೇಗದಲಿ ಪವನಜನ ಮೇಲಿತ್ತ ಪಾದ। ವೇಗದಲಿ ಸಂಚರಿಪ ಗರುಡನೇರಿದ ಪಾದ। ಭಾಗೀರಥಿಯನೂ ಪಡೆದ ಪಾವನವುಳ್ಳ ಶ್ರೀಪಾದ॥6॥ ತ್ರಿಜಗವಾಸಿಗಳೆಲ್ಲ ಭಜಿಸಿ ನಮಿಸುವ ಪಾದ। ವಿಜಯ ಸೋಮನಪುರ ದೊಳರ್ಚಿಸುವ ಪಾದ। ನಿಜದಿ ಗೋಕರ್ಣಗರ ರಮಣಿ ಗೈಸಿದ ಪಾದ। ಭಜನೆ ಮಾಳ್ಪರೆ ಮೋಕ್ಷ ನರಹರಿಯ ಶ್ರೀಪಾದ॥7॥

ಜಯ ಜಾನಕೀರಮಣ **ರಾಗ: ನಾಟ, ಝಂಪೆತಾಳ**

ಜಯ ಜಾನಕೀರಮಣ ಜಯ ವಿಭೀಷಣ ಶರಣ। ಜಯ ಸರೋರುಹ ಚರಣ ಜಯ ದೀನ ಕರುಣ॥ಜಯ॥ ಜಯ ಲೋಕ ಶರಣ್ಯ ಜಯ ಭಕ್ತ ಕಾರುಣ್ಯ। ಜಯ ದಿವ್ಯ ಲಾವಣ್ಯ ಜಯ ಜಗತ್ಪುಣ್ಯ॥ಜಯ॥ ಸಕಲ ಲೋಕವಾಸ ಸಾಕೇತ ಪುರವಾಸ। ಅಕಳಂಕ ನಿಜದಾಸ ಅಬ್ಜಮುಖಹಾಸ॥ಜಯ॥ ಶುಕಮುನಿ ಸ್ತುತಿಪಾತ್ರ ಶುಭದ ನಿಜ ಚಾರಿತ್ರ। ಮಕರ ಕುಂಡಲ ಕರ್ಣ ಮೇಘ ಸಮವರ್ಣ॥ಜಯ॥ ಕಮನೀಯ ಕುಟೀರ ಕೌಸ್ತುಭಾಲಂಕಾರ। ಕಮಲಾಕ್ಷ ರಘುವೀರ ಕಮಲಾವಿಹಾರ॥ಜಯ॥ ಸಮರರಿಪು ಜಯಧೀರ ಸಕಲಗುಣ ಗಂಭೀರ। ಅಮರ ಹೃತ್ಸಂಚಾರ ಅಖಿಲಾರ್ತಿ ಹರ॥ಜಯ॥ ರೂಪ ನಿಂದಿತಮಾರ ರುಚಿರ ಸದ್ಗುಣ ಶೂರ। ಭೂಪ ದಶರಥ ಕುಮಾರ ಭೂಭಾರಹರ॥ಜಯ॥ ಪಾಪ ಸಂಘವಿದಾರ ಪಂಕ್ತಿಮುಖ ಸಂಹಾರ। ಶ್ರೀಪತೇ ಸುಕುಮಾರ ಸೀತಾ ವಿಹಾರ॥ಜಯ॥

ಮನಸ್ಸು ಸ್ತುತಿ

ದೇವರನಾಮ

ಅನುಗಾಲವು ಚಿಂತೆ ಜೀವಕೆ **ರಾಗ: ಕಾಪಿ, ಆದಿತಾಳ**

ಅನುಗಾಲವು ಚಿಂತೆ ಜೀವಕೆ, ತನ್ನ ಮನವು ಶ್ರೀರಂಗನೊಳ್ ಮೆಚ್ಚುವ ತನಕ॥ಪ॥ ಸತಿಯು ಇದ್ದರು ಚಿಂತೆ, ಸತಿಯು ಇಲ್ಲದ ಚಿಂತೆ। ಮತಿಹೀನೆ ಸತಿಯಾದರು ಚಿಂತೆಯು। ಪೃಥ್ವಿಯೊಳಗೆ ಸತಿ ಅತಿ ಚೆಲ್ವೆಯಾದರೆ। ಮಿತಿ ಮೀರೆಯಿಲ್ಲದ ಮೋಹದ ಚಿಂತೆ॥1॥ ಪುತ್ರರಿದ್ದರು ಚಿಂತೆ ಪುತ್ರರಿಲ್ಲದ ಚಿಂತೆ। ಅತ್ತು ಅನ್ನಕೆ ಕಾಡುವ ಚಿಂತೆಯು। ತುತ್ತಿನ ಆಸೆಗೆ ತುರುಗಳ ಕಾಯ್ದರು। ಸುತ್ತೇಳು ಕಡೆಯಿಲ್ಲದ ಚಿಂತೆಯು॥2॥ ಬಡವನಾದರು ಚಿಂತೆ ಬಲ್ಲಿದನಾದರು ಚಿಂತೆ। ಹಿಡಿ ಹೊನ್ನು ಕೈಯೊಳಿದ್ದರು ಚಿಂತೆಯು। ಪೊಡವಿಯೊಳಗೆ ಸಿರಿ ಪುರಂದರವಿಠಲನ। ಬಿಡದೆ ಚಿಂತಿಸಿದರೆ ಚಿಂತೆ ನಿಶ್ಚಿಂತೆ॥3॥